**National**
**Kannada**
**26.03.2026 7.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ತೃತೀಯ ಲಿಂಗಿ ವ್ಯಕ್ತಿಗಳ ತಿದ್ದುಪಡಿ ಮಸೂದೆ - ೨೦೨೬ಕ್ಕೆ ಸಂಸತ್ತು ಅಂಗೀಕಾರ

2. ವಿಶ್ವದ ಅತ್ಯಂತ ಜನಪ್ರಿಯ ನಾಯಕ ಎಂಬ ಹೆಗ್ಗಳಿಕೆಗೆ ಪ್ರಧಾನಿ ನರೇಂದ್ರ ಮೋದಿ ಭಾಜನ

3. ಮಧ್ಯ ಏಷ್ಯಾ ಸಂಘರ್ಷ : ವಿರೋಧ ಪಕ್ಷಗಳು ಉಲ್ಲೇಖಿಸಿದ ಎಲ್ಲ ಕಳವಳಗಳಿಗೆ ಸರ್ವಪಕ್ಷ ಸಭೆಯಲ್ಲಿ ಪರಿಹಾರ- ಸಚಿವ ಕಿರಣ್ ರಿಜಿಜು

4. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಬಿಜೆಪಿಯಿಂದ ೧೯ ಅಭ್ಯರ್ಥಿಗಳ ೩ನೇ ಪಟ್ಟಿ ಬಿಡುಗಡೆ; ಕೇರಳ ಸೇರಿ ಕೆಲವು ರಾಜ್ಯಗಳಲ್ಲಿ ಉಮೇದುವಾರಿಕೆ ಹಿಂಪಡೆಯಲು ಇಂದು ಕೊನೆಯ ದಿನ

5. ಹೊರ್ಮುಜ್ ಜಲಸಂಧಿಯ ಮೂಲಕ ಭಾರತ ಸೇರಿ ಸ್ನೇಹಪರ ರಾಷ್ಟ್ರಗಳಿಗೆ ಹಡಗು ಹಾದು ಹೋಗಲು ಇರಾನ್ ಸಮ್ಮತಿ

<><><><>

ತೃತೀಯ ಲಿಂಗಿ ವ್ಯಕ್ತಿಗಳ ತಿದ್ದುಪಡಿ ಮಸೂದೆ - ೨೦೨೬ ಅನ್ನು ಸಂಸತ್ತು ಅಂಗೀಕರಿಸಿದ್ದು, ರಾಜ್ಯಸಭೆ ನಿನ್ನೆ ಅನುಮೋದನೆ ನೀಡಿದೆ. ಇದಕ್ಕೂ ಮುನ್ನ ಪ್ರತಿಪಕ್ಷಗಳು ಸದನದಿಂದ ಹೊರ ನಡೆದ ನಡುವೆಯು ಮಂಗಳವಾರ ಲೋಕಸಭೆಯಲ್ಲಿ ಧ್ವನಿ ಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಗಿತ್ತು. ಮಸೂದೆಯು ತೃತೀಯ ಲಿಂಗಿಗಳ ವರ್ಗವನ್ನು ಮರು ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ, ಸ್ವಯಂ-ಗ್ರಹಿತ ಲಿಂಗ ಗುರುತಿನ ನಿಬಂಧನೆಯನ್ನು ತೆಗೆದುಹಾಕುತ್ತದೆ ಮತ್ತು ಹಲವಾರು ಸಾಮಾಜಿಕ-ಸಾಂಸ್ಕೃತಿಕ ಗುರುತುಗಳನ್ನು ಮತ್ತು ಟ್ರಾನ್ಸ್ ಮ್ಯಾಸ್ಕ್ಯುಲಿನ್ ವ್ಯಕ್ತಿಗಳನ್ನು ಅದರ ವ್ಯಾಪ್ತಿಯಿಂದ ಹೊರಗಿಡುತ್ತದೆ. ರಾಜ್ಯಸಭೆಯಲ್ಲಿ ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸಿದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್, ತೃತೀಯ ಲಿಂಗಿ ಸಮುದಾಯದ ಯೋಗಕ್ಷೇಮದ ಬಗ್ಗೆ ಸರ್ಕಾರ ಸಹಾನುಭೂತಿ ಹೊಂದಿದೆ ಎಂದು ಹೇಳಿದರು. ಮಸೂದೆಯು ತೃತೀಯ ಲಿಂಗಿಗಳನ್ನು ಸಬಲೀಕರಣಗೊಳಿಸಲು ಮತ್ತು ಅವರಿಗೆ ಘನತೆಯನ್ನು ನೀಡಲು ಅವಕಾಶಗಳನ್ನು ಹೊಂದಿದೆ ಎಂದು ಅವರು ಹೇಳಿದರು. ತೃತೀಯ ಲಿಂಗಿಗಳನ್ನು ಮುಖ್ಯವಾಹಿನಿಗೆ ತರಲು ಮತ್ತು ಅವರ ವಿರುದ್ಧದ ತಾರತಮ್ಯವನ್ನು ನಿಲ್ಲಿಸಲು ಎನ್‌ಡಿಎ ಸರ್ಕಾರ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ ಎಂದು ಸಚಿವರು ವಿವರಿಸಿದರು.

<><><><>

ಅಮೆರಿಕ ಮೂಲದ ಡೇಟಾ ಅನಾಲಿಟಿಕ್ಸ್ ಸಂಸ್ಥೆ ಮಾರ್ನಿಂಗ್ ಕನ್ಸಲ್ಟ್ ನಡೆಸಿದ ಇತ್ತೀಚಿನ ಜಾಗತಿಕ ಸಮೀಕ್ಷೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶೇಕಡ ೭೮ ರಷ್ಟು ಅನುಮೋದನೆ ರೇಟಿಂಗ್ ಪಡೆದು ಮತ್ತೊಮ್ಮೆ ವಿಶ್ವದ ಅತ್ಯಂತ ಜನಪ್ರಿಯ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮಾರ್ಚ್ ೨ ಮತ್ತು ೮ ರ ನಡುವೆ ನಡೆಸಿದ ಸಮೀಕ್ಷೆಯು ಪ್ರಧಾನಿ ಮೋದಿ ಇತರ ಜಾಗತಿಕ ನಾಯಕರಿಗಿಂತ ಗಮನಾರ್ಹ ಮುನ್ನಡೆ ಕಾಯ್ದುಕೊಂಡಿದ್ದಾರೆ ಎಂದು ತೋರಿಸುತ್ತದೆ. ಸ್ವಿಟ್ಜರ್ಲೆಂಡ್ ಅಧ್ಯಕ್ಷ ಗೈ ಪರ್ಮೆಲಿನ್ ಮತ್ತು ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ-ಮ್ಯುಂಗ್ ಶೇಕಡ ೬೨ ರಷ್ಟು ಅನುಮೋದನೆ ರೇಟಿಂಗ್ ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಜೆಕ್ ರಿಪಬ್ಲಿಕ್ ಮತ್ತು ಅರ್ಜೆಂಟೀನಾದ ನಾಯಕರು ಕ್ರಮವಾಗಿ ಶೇಕಡ ೫೭ ಮತ್ತು ಶೇಕಡ ೫೬ ರಷ್ಟು ರೇಟಿಂಗ್ಸ್ ಹೊಂದಿದ್ದಾರೆ. ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಗೆ ಶೇಕಡ ೩೯ ರೇಟಿಂಗ್ಸ್ ಲಭಿಸಿದೆ.

<><><><>

೨೦೨೬-೨೭ ರಿಂದ ೨೦೩೫-೩೬ ರವರೆಗಿನ ಹತ್ತು ವರ್ಷಗಳ ಅವಧಿಗೆ ಒಟ್ಟು ೨೮ ಸಾವಿರದ ೮೪೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾದೇಶಿಕ ಸಂಪರ್ಕ ಯೋಜನೆ - ಮಾರ್ಪಡಿಸಿದ ಉಡಾನ್ ಅನ್ನು ಪ್ರಾರಂಭಿಸಲು ಮತ್ತು ಅನುಷ್ಠಾನಗೊಳಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಸಂಪುಟ ನಿರ್ಧಾರಗಳ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ವಾರ್ತಾ ಮತ್ತು ಪ್ರಸಾರ ಖಾತೆಸಚಿವ ಅಶ್ವಿನಿ ವೈಷ್ಣವ್, ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸಲು ೧೦೦ ವಿಮಾನ ನಿಲ್ದಾಣಗಳನ್ನು ಬಳಕೆಯಲ್ಲಿಲ್ಲದ ಏರ್ ಸ್ಟ್ರಿಪ್ ಗಳಿಂದ ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದರು. ಇದು ಶ್ರೇಣಿ -೨ ಮತ್ತು ಶ್ರೇಣಿ -೩ ನಗರಗಳಲ್ಲಿ ಆರ್ಥಿಕ ಬೆಳವಣಿಗೆ, ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತದೆ ಮತ್ತು ಸಾಮಾನ್ಯ ನಾಗರಿಕರಿಗೆ ಕೈಗೆಟುಕುವ ವಿಮಾನ ಪ್ರಯಾಣವನ್ನು ಬೆಂಬಲಿಸುತ್ತದೆ ಎಂದು ಅವರು ವಿವರಿಸಿದರು.

<><><><>

ರೈಲ್ವೆ ತನ್ನ ಸಂವಹನ ಮೂಲಸೌಕರ್ಯವನ್ನು ನವೀಕರಿಸಲು ಮತ್ತು ಅನೇಕ ವಲಯಗಳಲ್ಲಿ ಕವಚ್ ಸ್ವಯಂಚಾಲಿತ ರೈಲು ಸಂರಕ್ಷಣಾ ವ್ಯವಸ್ಥೆಯನ್ನು ವಿಸ್ತರಿಸಲು ೧ ಸಾವಿರದ ೨೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಯೋಜನೆಗಳಿಗೆ ಅನುಮೋದನೆ ನೀಡಿದೆ. ಸುಧಾರಿತ ಫೈಬರ್ ಸಂವಹನ ವ್ಯವಸ್ಥೆಗಳು ಮತ್ತು ವರ್ಧಿತ ಸುರಕ್ಷತಾ ಕಾರ್ಯವಿಧಾನಗಳ ಮೂಲಕ ರೈಲ್ವೆ ಜಾಲವನ್ನು ಬಲಪಡಿಸುವ ಗುರಿಯನ್ನು ಈ ಯೋಜನೆಗಳು ಹೊಂದಿವೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಕೇಂದ್ರ ರೈಲ್ವೆಯ ಎಲ್ಲಾ ಐದು ವಿಭಾಗಗಳಲ್ಲಿ ೬೦೦ ಕೋಟಿ ರೂಪಾಯಿಗೂ ಹೆಚ್ಚು ವೆಚ್ಚದಲ್ಲಿ ದೃಢವಾದ ಡ್ಯುಯಲ್ ಫೈಬರ್ ಸಂವಹನ ಜಾಲವನ್ನು ಸ್ಥಾಪಿಸಲು ಎರಡು ಪ್ರಮುಖ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ವಿಶ್ವಾಸಾರ್ಹ,

ಡ್ಯುಯಲ್-ಪಾತ್ ಸಂವಹನ ಬೆನ್ನೆಲುಬನ್ನು ರಚಿಸಲು, ತಡೆರಹಿತ ಕಾರ್ಯಾಚರಣೆಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಫೈಬರ್ ಸಾಮರ್ಥ್ಯವನ್ನು ಗುತ್ತಿಗೆಗೆ ನೀಡುವ ಮೂಲಕ ಹೆಚ್ಚುವರಿ ಆದಾಯ ಉತ್ಪಾದನೆಯನ್ನು ಸಕ್ರಿಯಗೊಳಿಸಲು ಆಪ್ಟಿಕಲ್ ಫೈಬರ್ ಮತ್ತು ಓವರ್‌ಹೆಡ್ ಗ್ರೌಂಡ್ ವೈರ್ ವ್ಯವಸ್ಥೆಗಳನ್ನು ನಿಯೋಜಿಸಲಾಗುವುದು ಎಂದು ಸಚಿವಾಲಯ ಹೇಳಿದೆ.

<><><><>

ಮುಂಬರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷ - ಬಿಜೆಪಿ ನಿನ್ನೆ ೧೯ ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ರಾಜ್ಯದ ಎಲ್ಲಾ ೨೯೪ ಕ್ಷೇತ್ರಗಳಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧ ಹೆಚ್ಚಿನ ಸ್ಪರ್ಧೆಗೆ ವೇದಿಕೆ ಕಲ್ಪಿಸಿದೆ. ಆರ್.ಜಿ.ಕರ್ ಮೆಡಿಕಲ್ ಕಾಲೇಜಿನ ಅತ್ಯಾಚಾರ ಮತ್ತು ಕೊಲೆ ಸಂತ್ರಸ್ತೆಯ ತಾಯಿ ರತ್ನಾ ದೇಬ್ನಾಥ್ ಅವರನ್ನು ಪಾನಿಹಟಿ ಕ್ಷೇತ್ರದಿಂದ ಕಣಕ್ಕಿಳಿಸಲಾಗುತ್ತಿದೆ. ಇದಕ್ಕೂ ಮುನ್ನ ಮಾರ್ಚ್ ೧೯ ರಂದು ಬಿಜೆಪಿ ೧೧೧ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. ರಾಜ್ಯದಲ್ಲಿ ಏಪ್ರಿಲ್ ೨೩ ಮತ್ತು ಏಪ್ರಿಲ್ ೨೯ ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಮೇ ೪ ರಂದು ಎರಡೂ ಹಂತಗಳ ಮತ ಎಣಿಕೆ ನಡೆಯಲಿದೆ.

<><><><>

ಹಾರ್ಮುಜ್ ಜಲಸಂಧಿಯ ಮೂಲಕ ಭಾರತ ಸೇರಿದಂತೆ ಸ್ನೇಹಪರ ರಾಷ್ಟ್ರಗಳಿಗೆ ಹಡಗುಗಳನ್ನು ಹಾದುಹೋಗಲು ಅನುಮತಿ ನೀಡಲಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಇಂದು ಹೇಳಿದ್ದಾರೆ. ಈ ಮಧ್ಯೆ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್, ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಕರೆ ನೀಡಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, 'ಹಾರ್ಮುಜ್ ಜಲಸಂಧಿಯ ದೀರ್ಘಕಾಲದ ಮುಚ್ಚುವಿಕೆಯು ಜಾಗತಿಕ ನಾಟಿ ಋತುವಿನ ನಿರ್ಣಾಯಕ ಕ್ಷಣದಲ್ಲಿ ತೈಲ, ಅನಿಲ ಮತ್ತು ರಸಗೊಬ್ಬರದ ಚಲನೆಯನ್ನು ಉಸಿರುಗಟ್ಟಿಸುತ್ತಿದೆ. ಈ ಪ್ರದೇಶದಾದ್ಯಂತ ಮತ್ತು ಅದರಾಚೆಗೆ, ನಾಗರಿಕರು ಗಂಭೀರ ಹಾನಿಯನ್ನು ಸಹಿಸಿಕೊಳ್ಳುತ್ತಿದ್ದಾರೆ ಮತ್ತು ತೀವ್ರ ಅಭದ್ರತೆಯಲ್ಲಿ ಬದುಕುತ್ತಿದ್ದಾರೆ ಎಂದಿದ್ದಾರೆ. ಯುದ್ಧದ ಪರಿಣಾಮಗಳನ್ನು ಕಡಿಮೆ ಮಾಡಲು ವಿಶ್ವಸಂಸ್ಥೆ ಕೆಲಸ ಮಾಡುತ್ತಿದ್ದು, ಪಶ್ಚಿಮ ಏಷ್ಯಾದಲ್ಲಿ ಯುದ್ಧವನ್ನು ಕೊನೆಗೊಳಿಸುವಂತೆ ಗುಟೆರಸ್ ಅಮೆರಿಕ ಮತ್ತು ಇಸ್ರೇಲ್ ಅನ್ನು ಒತ್ತಾಯಿಸಿದ್ದಾರೆ.

<><><><>

ನಾಮಪತ್ರ ಹಿಂಪಡೆಯುವ ಗಡುವು ಇಂದು ಕೊನೆಗೊಳ್ಳುತ್ತಿದ್ದಂತೆ, ಕೇರಳದ ಎಲ್ಲಾ ೧೪೦ ಕ್ಷೇತ್ರಗಳಲ್ಲಿನ ಚುನಾವಣಾ ಸ್ಪರ್ಧೆಯ ಸ್ಪಷ್ಟ ಚಿತ್ರಣ ಇಂದು ಮಧ್ಯಾಹ್ನದ ವೇಳೆಗೆ ಲಭ್ಯವಾಗಲಿದೆ. ನಿನ್ನೆ ಸಂಜೆಯವರೆಗಿನ ಮಾಹಿತಿಯ ಪ್ರಕಾರ, ಒಟ್ಟು ೯೮೫ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಸಲ್ಲಿಕೆಯಾದ ೨ ಸಾವಿರದ ೧೨೫ ನಾಮಪತ್ರಗಳ ಪೈಕಿ ೧,೭೫೪ ನಾಮಪತ್ರಗಳನ್ನು

ಅಂಗೀಕರಿಸಲಾಗಿದ್ದು, ೩೫೭ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ಇದುವರೆಗೂ ೧೪ ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದಾರೆ. ಮುಂದಿನ ತಿಂಗಳ ೬ ರಂದು ಮತದಾನ ನಿಗದಿಯಾಗಿರುವ ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ ಪುದುಚೆರಿ ಮತ್ತು ಉಪಚುನಾವಣೆ ನಿಗದಿಯಾಗಿರುವ ೭ ರಾಜ್ಯಗಳ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ನಿನ್ನೆ ನಾಮಪತ್ರ ಪರಿಶೀಲನೆ ಕೊನೆಗೊಂಡಿದೆ.

<><><><>

ಆಕಾಶವಾಣಿ ಇಂದಿನಿಂದ ತನ್ನ ಬೆಳಗಿನ ಪ್ರಸಾರವನ್ನು ರಾಷ್ಟ್ರೀಯ ಗೀತೆ ವಂದೇ ಮಾತರಂ ಸಂಪೂರ್ಣ ಅವತರಣಿಕೆಯನ್ನು ಪ್ರಸಾರ ಮಾಡುವ ಮೂಲಕ ಆರಂಭಿಸಲಿದೆ.

<><><><>

ಬಾಂಗ್ಲಾದೇಶದಲ್ಲಿ ಪದ್ಮಾ ನದಿಗೆ ಬಸ್ ಉರುಳಿ ಬಿದ್ದ ಪರಿಣಾಮ ೧೩ ಜನರು ಮೃತಪಟ್ಟಿದ್ದು ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

<><><><>

ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಶನ್ ವತಿಯಿಂದ ನಡೆಯುತ್ತಿರುವ ೧೦ ವರ್ಷದೊಳಗಿನವರ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ, ಭಾರತದ ಪುರುಷರ ತಂಡವು ಇಂದು ಮಾಲೆಯಲ್ಲಿ ಪಾಕಿಸ್ತಾನದ ವಿರುದ್ಧದ ಹೈ-ವೋಲ್ಟೇಜ್ ಪಂದ್ಯದೊಂದಿಗೆ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>